

# ಜೀವನದ ಬಗೆಗೆ ಎಂಥ ಮುನಿಸು? ಯಾವ ಸಂದರ್ಭದಲ್ಲೂ ಬದುಕೇ ನಮ್ಮ ಆಯ್ಕೆ

ಮನುಷ್ಯ ಏಕೆ ಅಪರಾಧ ಎಸಗುತ್ತಾನೆ? ಖಿನ್ನತೆಗೆ ಜಾರುವುದು ಯಾಕೆ? ಕೋಪದಿಂದ ಧಗಿಧಗಿಸುವುದು ಯಾಕೆ? ನಿರ್ಮಲ ಮುಗಿಲಿನಂತೆ ಸಮಾಧಾನಿಯಾಗಿರುವುದು ಹೇಗೆ? ಪ್ರತಿಯೊಂದು ಪ್ರಶ್ನೆಗೂ ತತ್ವಶಾಸ್ತ್ರದಲ್ಲಿ ಉತ್ತರವಿದೆ. ಆದರೆ, ಈ ಉತ್ತರಗಳು ಅನುಭವದಿಂದ ದಕ್ಕಿದಾಗಷ್ಟೇ ಪರಿಪೂರ್ಣ. ಅನುಭವಗಳು ಭಿನ್ನವಾದಷ್ಟೂ ಮನುಷ್ಯನ ಮನಸ್ಸಿನ ಜಿಜ್ಞಾಸೆಗಳ ಕುರಿತ ಉತ್ತರಗಳೂ ಭಿನ್ನವಾಗಿರುತ್ತವೆ. ಎಲ್ಲರೂ ಒಪ್ಪಬಹುದಾದ ಸತ್ಯ ಒಂದೇ – ‘ಬದುಕು ದೊಡ್ಡದು’. ಬದುಕನ್ನು ಪ್ರೀತಿಯಿಂದ ಕಾಣುವುದೇ ಅರ್ಥಪೂರ್ಣವಾಗಿ ಜೀವನ ಸಾಗಿಸುವ ಮಾರ್ಗ. ಎಂತಹ ಸಂದರ್ಭದಲ್ಲೂ ಬದುಕಿನೊಂದಿಗೆ ಮುನಿಸು ಸಲ್ಲದು ಎನ್ನುವ ಈ ಬರಹ, ಬದುಕನ್ನು ಪ್ರೀತಿ–ಸಹನೆಯಿಂದ ನಿರ್ವಹಿಸಿದಲ್ಲಿ ಎಷ್ಟು ಕಠಿಣವಾದ ಅಡೆತಡೆಯನ್ನೂ ನಿಭಾಯಿಸಬಹುದು ಎನ್ನುವುದನ್ನು ಅನುಭವ ವೃತ್ತಾಂತಗಳ ಮೂಲಕ ಸಹೃದಯರಿಗೆ ಮನದಟ್ಟು ಮಾಡಿಸುವ ಹೃದ್ಯ ಪ್ರಯತ್ನ.

■ ನೇಮಿಚಂದ್ರ